



# ಬಿಸಿನೀರ ಕೊಳ - ನೈಸರ್ಗಿಕ ಸ್ಪಾ

ಪ್ರಕೃತಿಯಲ್ಲಿ ಮೊಗೆದಷ್ಟೂ ಅಚ್ಚರಿಗಳ ಕಣಜ ಸಿಗುತ್ತವೆ. ಅದರ ನೈಸರ್ಗಿಕ ಸೃಷ್ಟಿಗೆ ಮಾರುಹೋಗದವರಿಲ್ಲ. ಟರ್ಕಿಯ ಈ ಪಮುಕ್ಕಲಿ ಇಂತಹ ಅಚ್ಚರಿಗಳಲ್ಲಿ ಒಂದು.

ಸದಾ ಶುದ್ಧ ನೀರನ್ನೇ ಹೊರಸೂಸುವ ಸಾವಿರಾರು ವರ್ಷಗಳ ಇತಿಹಾಸವಿರುವ ಈ ಸ್ಥಳದಲ್ಲಿ ಪುಟ್ಟಪುಟ್ಟ ಬಿಸಿನೀರಿನ ಕೊಳಗಳಿವೆ. ರೋಮನ್ನರು ಇದನ್ನು ನಾಗರಿಕರಿಗೆ ಆರೋಗ್ಯ ಸೌಲಭ್ಯಕ್ಕಾಗಿ ನಿರ್ಮಿಸಿದರು ಎಂಬ ಪ್ರತೀತಿಯೂ ಇದೆ.

ಸಾಕಷ್ಟು ಖನಿಜಾಂಶವನ್ನು ಈ ನೀರು ಹೊಂದಿದ್ದು, ಇಲ್ಲಿ ಒಮ್ಮೆ ಮಿಂದೆದ್ದರೆ ದೇಹ ಪೂರ್ತಿ ಐಷಾರಾಮಿ ಸ್ಪಾದಲ್ಲಿ ದೇಹಶುದ್ಧಿ ಮಾಡಿಸಿಕೊಂಡ ಅನುಭವವಾಗುತ್ತದೆ. ಇಲ್ಲಿನ ನೀರು ಆಸ್ತಮಾ ಹಾಗೂ ಸಂಧಿವಾತ ರೋಗಗಳನ್ನೂ ಗುಣಪಡಿಸುತ್ತದೆ ಎನ್ನಲಾಗಿದೆ. ಅಲ್ಲದೆ ಅಧಿಕ ರಕ್ತದೊತ್ತಡ, ಕಿಡ್ನಿಯಲ್ಲಿ ಕಲ್ಲು, ಲಕ್ವ ಇತ್ಯಾದಿ ಕಾಯಿಲೆಗಳ ನಿವಾರಣೆಗೂ ಈ ನೀರನ್ನು ಬಳಸಲಾಗುತ್ತದೆ.

ಈ ಕಾರಣದಿಂದ ನಿತ್ಯ ಇಲ್ಲಿಗೆ ಸಾವಿರಾರು ಜನ ಭೇಟಿ ನೀಡುತ್ತಾರೆ. 1980ರ ದಶಕದವರೆಗೂ ಹೊರ ಜಗತ್ತಿಗೆ ಈ ಸ್ಥಳದ ಪರಿಚಯವೇ ಇರಲಿಲ್ಲ. ಬಳಿಕ ಪಮುಕ್ಕಲಿ ಮಹತ್ವ ಅರಿತ ಇಲ್ಲಿನ ಆಡಳಿತ ಸ್ಪಾ ಕೇಂದ್ರವಾಗಿ ಅಭಿವೃದ್ಧಿಪಡಿಸಿ ವಿದೇಶಿ ಪ್ರವಾಸಿಗರನ್ನು ಸೆಳೆಯಲು ನಿರ್ಧರಿಸಿತು. ಇಲ್ಲಿಗೆ ಭೇಟಿ ನೀಡಲು ರಸ್ತೆಯನ್ನು ಅಭಿವೃದ್ಧಿಪಡಿಸಲಾಯಿತು. ಇಳಿಜಾರು ಪ್ರದೇಶದಲ್ಲಿ ಇನ್ನಷ್ಟು ಬಿಸಿನೀರಿನ ಕೊಳಗಳನ್ನು ನಿರ್ಮಿಸಲಾಯಿತು. 1988ರಲ್ಲಿ ಯುನೆಸ್ಕೊ ಈ ಸ್ಥಳವನ್ನು ವಿಶ್ವ ಪಾರಂಪರಿಕ ತಾಣವಾಗಿ ಘೋಷಿಸಿತು.

ದೂರದಿಂದ ನೋಡಲು ಹತ್ತಿಯ ಕೋಟೆ ರೀತಿ ಕಾಣುವ ಈ ಪಮುಕ್ಕಲಿಯ ಇನ್ನೊಂದು ಹೆಸರು ‘ಕಾಟನ್ ಕಸ್ಟೆಲ್’. ಕಲಾಕಾರ ಬಿಳಿಯ ಬೆಟ್ಟವನ್ನೇ ಕಟೆದು ಮೆಟ್ಟಿಲುಗಳನ್ನು ರಚಿಸಿದ್ದಾನೇನೊ ಎಂಬಂತೆ ಭಾಸವಾಗುತ್ತದೆ ಈ ಸ್ಥಳ. ಜುಲೈ ತಿಂಗಳು ಪಮುಕ್ಕಲಿಗೆ ಭೇಟಿ ನೀಡಲು ಪ್ರಶಸ್ತ ಸಮಯ. ಸ್ಥಳೀಯರ ಪ್ರಕಾರ, ಕೊಳಗಳಲ್ಲಿನ ನೀರಿನಲ್ಲಿ ಖನಿಜಾಂಶ ಯಥೇಚ್ಛವಾಗಿರಲು ಕಾರಣ ಕೊಳಗಳ ಆಳದಲ್ಲಿ ಇರುವ ಬಿಸಿನೀರಿನ ಮೂಲಗಳು. ಟರ್ಕಿಯ ಡೆನಿಜಿಲ್‌ನಲ್ಲಿರುವ ಈ ತಾಣ ಈಗಲೂ ತನ್ನ ನಿಗೂಢತೆಯ ಗುಟ್ಟನ್ನು ಕಾಪಿಟ್ಟುಕೊಂಡಿದೆ.

■ ಸುಮಾ ಬಿ.